
# ಕಾತ್ಯಾಯಿನೀ ಮತ್ತು ಮೈತ್ರೇಯೀ



ಶ್ರೀಮತಿ ಕೆ.ಎಸ್. ರಮಾ

**ಆಧ್ಯಾತ್ಮಿಕ ಗುರಿ ಒಂದೇ ಆದರೂ ಮನೋಭಾವಕ್ಕನುಗುಣವಾಗಿ ಮಾರ್ಗ ಬದಲಾಗುತ್ತದೆ ಎಂಬುದನ್ನು ಉಪನಿಷತ್ ಕಾಲದ ಎರಡು ಸ್ತ್ರೀರತ್ನಗಳ ಮೂಲಕ ವಿವರಿಸಿರುವ ಲೇಖಕಿ ಶ್ರೀಮತಿ ಕೆ.ಎಸ್. ರಮಾ ಅವರು ಬೆಂಗಳೂರಿನ ಕಾಲೇಜೊಂದರಲ್ಲಿ ಸಂಸ್ಕೃತ ಪ್ರಾಧ್ಯಾಪಕರಾಗಿರುವರು.**

## ಮಹಿಳೆಯರ ಎರಡು ಮುಖಗಳು

ವೇದಗಳು ನಾಲ್ಕು—ಋಗ್ವೇದ, ಯಜುರ್ವೇದ, ಸಾಮವೇದ ಮತ್ತು ಅಥರ್ವವೇದ. ಯಜುರ್ವೇದವು ಕೃಷ್ಣಯಜುರ್ವೇದ ಮತ್ತು ಶುಕ್ಲಯಜುರ್ವೇದವೆಂದು ಎರಡು ವಿಭಾಗವಾಗಿದೆ. ಶುಕ್ಲಯಜುರ್ವೇದದ ಪ್ರವರ್ತಕರು, ದ್ರಷ್ಟಾರ ಶ್ರೀ ಯಾಜ್ಞವಲ್ಕ್ಯರು.

ಯಾಜ್ಞವಲ್ಕ್ಯರಿಗೆ ಇಬ್ಬರು ಪತ್ನಿಯರು. ಕಾತ್ಯಾಯಿನೀ ಮತ್ತು ಮೈತ್ರೇಯೀ. ಇವರಿಬ್ಬರ ಜೀವನದರ್ಶನವು, ವೇದಕಾಲದ ಮಹಿಳೆಯ ಎರಡು ಮುಖಗಳನ್ನು ಚಿತ್ರಿಸುತ್ತದೆ.

ಬೃಹದಾರಣ್ಯಕೋಪನಿಷತ್ತಿನ ಎರಡನೇ ಅಧ್ಯಾಯದ ನಾಲ್ಕನೇ ಬ್ರಾಹ್ಮಣ ಹಾಗೂ ನಾಲ್ಕನೇ ಅಧ್ಯಾಯದ ಐದನೇ ಬ್ರಾಹ್ಮಣ ಯಾಜ್ಞವಲ್ಕ್ಯರಿಗೆ ಮೈತ್ರೇಯೀ ಮತ್ತು ಕಾತ್ಯಾಯಿನೀ ಎಂಬ ಇಬ್ಬರು ಪತ್ನಿಯರಿದ್ದರೆಂದು ತಿಳಿಸುತ್ತವೆ. ನಾಲ್ಕನೇ ಅಧ್ಯಾಯದ ೫ನೇ ಬ್ರಾಹ್ಮಣವು (ಇದನ್ನು ಮೈತ್ರೇಯೀ ಬ್ರಾಹ್ಮಣವೆಂದು ಕರೆದಿದ್ದಾರೆ) ಈ ರೀತಿ ಪ್ರಾರಂಭವಾಗುತ್ತದೆ:

**ಅಥ ಹ ಯಾಜ್ಞವಲ್ಕ್ಯಸ್ಯ ದ್ವೇ ಭಾರ್ಯೇ ಬಭೂವತುಃ ಮೈತ್ರೇಯೀ ಚ ಕಾತ್ಯಾಯಿನೀ ಚ ತಯೋರ್ಹ ಮೈತ್ರೇಯೀ ಬ್ರಹ್ಮವಾದಿನೀ ಬಭೂವ ಸ್ತ್ರೀಪ್ರಜ್ಞೈವ ತರ್ಹಿ ಕಾತ್ಯಾಯಿನೀ |**

(ಯಾಜ್ಞವಲ್ಕ್ಯನಿಗೆ ಮೈತ್ರೇಯೀ ಮತ್ತು ಕಾತ್ಯಾಯಿನೀ ಎಂಬ ಇಬ್ಬರು ಮಡದಿಯರಿದ್ದರು. ಅವರಿಬ್ಬರಲ್ಲಿ ಮೈತ್ರೇಯಿಯು ಬ್ರಹ್ಮವಾದಿನಿಯಾಗಿದ್ದಳು. ಆದರೆ ಕಾತ್ಯಾಯಿನಿಯು ಸ್ತ್ರೀಪ್ರಜ್ಞಳಾಗಿದ್ದಳು.)

## ಸ್ತ್ರೀಪ್ರಜ್ಞೆ

ಕಾತ್ಯಾಯಿನಿಯು ತಂದೆ ತಾಯಿಗಳಾಸೆಯಂತೆ ಯಾಜ್ಞವಲ್ಕ್ಯರ ಕೈಹಿಡಿದು ಅವರ ಆಶ್ರಮಕ್ಕೆ ವಧುವಾಗಿ ಬಂದವಳು. ಗೃಹಕೃತ್ಯದಲ್ಲಿ ಪ್ರವೀಣೆ ಅವಳು. ಉಪನಿಷತ್ತಿನಲ್ಲಿ ಅವಳ ಬಗ್ಗೆ ಇರುವುದು ಒಂದು ವಾಕ್ಯ ಮಾತ್ರ **'ಸ್ತ್ರೀಪ್ರಜ್ಞೈವ ಕಾತ್ಯಾಯಿನೀ'** ಕಾತ್ಯಾಯಿನಿ ಸ್ತ್ರೀಪ್ರಜ್ಞೆಯುಳ್ಳವಳು. ಅಂದರೆ ಸ್ತ್ರೀಯೊಬ್ಬಳು ಯಾವ ಯಾವ ಕಾರ್ಯಗಳನ್ನು ದಕ್ಷವಾಗಿ ನಿರ್ವಹಿಸಬಲ್ಲಳೋ ಅವಳು ಸ್ತ್ರೀಪ್ರಜ್ಞೆ. ಸ್ತ್ರೀ ಎನ್ನುವುದು ಒಂದು ಪದವಲ್ಲ, ಅದೊಂದು ಶಕ್ತಿ. ಜ್ಞಾ ಧಾತುವು ತಿಳಿವಳಿಕೆ ಎನ್ನುವ ಅರ್ಥವನ್ನು ಕೊಡುತ್ತದೆ. 'ಪ್ರ' ಉಪಸರ್ಗವು 'ವಿಶೇಷ'ವಾದ 'ತಿಳಿವಳಿಕೆ'ಯನ್ನು ನೀಡುತ್ತದೆ. ಹಾಗಾಗಿ ಪ್ರಜ್ಞಾ, ಸ್ತ್ರೀಶಕ್ತಿಯ ಪರಾಕಾಷ್ಠೆ ಕಾತ್ಯಾಯಿನಿ. ಮಾನಸಿಕವಾಗಿ, ತನ್ನ ಪತಿಯನ್ನು ಸಮಾಧಾನ ಸಂತುಷ್ಟಿಯಲ್ಲಿರಿಸಿ ವೈವಾಹಿಕ ಜೀವನವನ್ನು ಸುಖಮಯವಾಗಿ ಯಾವ ಸ್ತ್ರೀ ಮಾಡಬಲ್ಲಳೋ ಅವಳು ಸ್ತ್ರೀಪ್ರಜ್ಞೆ. ಗೃಹಕೃತ್ಯದ ಜವಾಬ್ದಾರಿಯನ್ನು ನಿರ್ವಹಿಸುವ, ಪತಿಯ ಮಾರ್ಗವನ್ನು ಸುಖಕರ ಮಾಡುವ, ಅವನ ಜ್ಞಾನಾರ್ಜನೆಯ ಮೆಟ್ಟಿಲು ತಾನಾಗಿ ಬದುಕು ಹದನಾಗಿಸುವ ಕಾರ್ಯ ಪತ್ನಿಯದು. ಪತಿಯ ಯಶಸ್ಸಿನಲ್ಲಿ ಯಶಸ್ಸು ಕಾಣುವ, ಬಾಳನ್ನು ಬಾಳುವ ತ್ಯಾಗಮಯೀ ಜೀವಿ ಹೆಣ್ಣಿನ ಒಂದು ಮುಖ ಇಲ್ಲಿ ಕಾಣುತ್ತದೆ. ಇದು ಹಿಂದೂ ನಾರೀತ್ವದ, ವೇದ ಕಾಲದ ಮಹಿಳೆಯ ಒಂದು ಮುಖ! *Behind every man's success there is a woman* (ಪುರುಷನ ಎಲ್ಲ ಯಶಸ್ಸಿನ ಹಿಂದೆ ಸ್ತ್ರೀಯ ಪಾತ್ರವಿದೆ) ಎನ್ನುವ ಉಕ್ತಿಯನ್ನು ಇಲ್ಲಿ ಜ್ಞಾಪಿಸಿಕೊಳ್ಳಬಹುದು.

## ಪತಿಭಕ್ತಿ

'ದೇವುಡು'ರವರು ತಮ್ಮ ಅಮೋಘ ಗ್ರಂಥ 'ಮಹಾದರ್ಶನ'ದಲ್ಲಿ ಕಾತ್ಯಾಯಿನಿಯ ಸುಂದರವಾದ ಚಿತ್ರಣವನ್ನು ಬಿಡಿಸಿದ್ದಾರೆ. ಈ ಒಂದು ಚಿತ್ರಣ 'ಸ್ತ್ರೀಪ್ರಜ್ಞಾ' ಎನ್ನುವ ಉಪನಿಷತ್ತಿನ ಒಂದು ಪದದ ಮೇಲೆಯೇ ಆಧಾರವಾಗಿದೆ. ಅತ್ತೆಯ ಮನೆಗೆ ಬಂದು ಪುಟ್ಟಸೊಸೆ ಕಾತ್ಯಾಯಿನಿ ಹಿರಿಯರಿಗೆ ನಮ್ರತೆಯಿಂದ ಗೌರವದಿಂದ ನಡೆದುಕೊಂಡು ಮುದ್ದಿನ ಸೊಸೆಯಾಗಿದ್ದಾಳೆ. ಪತಿಯು ಆದಿತ್ಯೋಪಾಸನೆಯಲ್ಲಿದ್ದಾನೆ. ಆದಿತ್ಯನ ಪ್ರಸಾದವಾದ ಪಾಯಸವನ್ನು ಬಿಟ್ಟು ಮತ್ತೇನನ್ನೂ

ಆಹಾರವಾಗಿ ತೆಗೆದುಕೊಳ್ಳುತ್ತಿಲ್ಲ. ಒಂದು ವರ್ಷ ಇದೇ ಅವನ ಆಹಾರ. ಪತ್ನಿಯಾದ ತಾನೂ ಅವನಂತೆಯೇ ಇರಬೇಕೆಂದು ಆಶಿಸುವಳು. ಪತ್ನಿಯಾದ ತಾನು ಅವನ ನೆರಳಾಗಿರಬೇಕು. ಮುತ್ತೈದೆಯಾಗಿ ಊಟ ಬಿಡಬೇಕಾದರೆ ಪತಿಯ ಅಪ್ಪಣೆಯಾಗ ಬೇಕು ಎಂಬ ಹಿರಿಯರ ಮಾತನ್ನೇ ಆಶ್ರಯಿಸುವಳು. ಅದರಂತೆ ಮಾಡುವಳು. ಸಮಯಸಂದಂತೆ ಆಶ್ರಮದ ಕಾರ್ಯವನ್ನೆಲ್ಲಾ ತಾನು ವಹಿಸಿಕೊಂಡು ಪತಿಯ ಉಪಾಸನೆಗೆ ನೆರವಾಗುವಳು. ಯಾಜ್ಞವಲ್ಕ್ಯರನ್ನು ಜ್ಞಾನಸತ್ರಕ್ಕೆ ಹೋಗಲು ಪ್ರೇರೇಪಿಸುವಳು ಅವಳು. ಅಲ್ಲಿ ಪತಿಯು ಎಲ್ಲ ವಿದ್ವಾಂಸರನ್ನು ಸೋಲಿಸ ಬೇಕೆಂದು ಆಶಿಸುವಳು. ಮೈತ್ರೇಯಿಯ ಜೊತೆಯಲ್ಲಿ ಸಮಾಧಿಯ ಅನುಭವವನ್ನು ಪಡೆಯಬಹುದಾಗಿದ್ದರೂ ಅದರಲ್ಲಿ 'ತಾನು' ಎನ್ನುವುದು ಮರೆತುಹೋಗುತ್ತದೆ—'ತಾನು ಕಾತ್ಯಾಯಿನಿ, ಭಗವಾನ್ ಯಾಜ್ಞ ವಲ್ಕ್ಯರ ಸೇವೆಗಾಗಿಯೇ ಇರುವವಳು ಎನ್ನುವುದು ತಪ್ಪಿಹೋಗುತ್ತದೆ'— ಎಂದು ಆ ಸ್ಥಿತಿಯನ್ನೇ ಬೇಡವೆನ್ನು ವಳು. ಇದು ಸ್ತ್ರೀಪ್ರಜ್ಞೆ. ದೀಪ ತನ್ನನ್ನು ತಾನೇ ಉರಿಸಿಕೊಂಡು ನಂದುತ್ತದೆ. ಆದರೆ ಬೇರೆಯವರಿಗೆ ಬೆಳಕು ನೀಡು ತ್ತದೆ. ಆ ದೀಪ ಕಾತ್ಯಾಯಿನಿ.

> **ದೀಪ ತನ್ನನ್ನು ತಾನೇ ಉರಿಸಿಕೊಂಡು ನಂದುತ್ತದೆ. ಆದರೆ ಬೇರೆಯವರಿಗೆ ಬೆಳಕು ನೀಡುತ್ತದೆ. ಆ ದೀಪ ಕಾತ್ಯಾಯಿನಿ.**

## ಮೈತ್ರೇಯಿಯ ಜ್ಞಾನದಾಹ

ಬ್ರಹ್ಮವಾದಿನಿ ಮೈತ್ರೇಯೀ ವೇದಕಾಲದ ಮಹಿಳೆಯ ಇನ್ನೊಂದು ಮುಖ. ಅವಳಿಗೆ ಅಧ್ಯಾತ್ಮದಲ್ಲಿ ಆಸಕ್ತಿ, ಜ್ಞಾನಾ ರ್ಜನೆಯೇ ಗುರಿ. ಪ್ರಾಪಂಚಿಕ ಭೋಗಗಳೂ ಬೇಡ. ಬೃಹದಾ ರಣ್ಯಕ ಉಪನಿಷತ್ತಿನ ಎರಡನೇ ಅಧ್ಯಾಯದ ನಾಲ್ಕನೆಯ ಬ್ರಾಹ್ಮಣದಲ್ಲಿ ಯಾಜ್ಞವಲ್ಕ್ಯರು ಮೈತ್ರೇಯಿಯನ್ನು ಕರೆದು ಈ ರೀತಿ ಹೇಳುತ್ತಾರೆ. ಈ ಬ್ರಾಹ್ಮಣವು ಹೀಗೆ ಪ್ರಾರಂಭ ವಾಗುತ್ತದೆ :

**ಮೈತ್ರೇಯೀತಿ ಹೋವಾಚ ಯಾಜ್ಞವಲ್ಕ್ಯಃ ।**
**ಉದ್ಯಾಸ್ಯನ್ವಾ ಅರೇಽಹಮಸ್ಮಾತ್ ಸ್ಥಾನಾದಸ್ಮಿ ಹಂತ**
**ತೇಽನಯಾ ಕಾತ್ಯಾಯನ್ಯಾಂತಂ ಕರವಾಣೀತಿ ।**

'ಹೇ ಮೈತ್ರೇಯೀ, ನಾನು ಈ ಸ್ಥಾನದಿಂದ (ಅಂದರೆ ಗೃಹಸ್ಥಾಶ್ರಮದಿಂದ) ಎತ್ತರದ ಸ್ಥಾನಕ್ಕೆ (ಅಂದರೆ ಸಂನ್ಯಾಸಕ್ಕೆ) ಹೋಗಲು ಇಚ್ಛಿಸುತ್ತೇನೆ. ಹೇ, ನಿನ್ನ ಮತ್ತು ಈ ಕಾತ್ಯಾಯಿನಿ ಯ ಕಲಹಶಾಂತಿಗಾಗಿ ದ್ರವ್ಯವಿಭಾಗವನ್ನು ಮಾಡುವೆನು' ಎಂದು ತಿಳಿಸುತ್ತಾರೆ. ತಮ್ಮ ಆಸ್ತಿಯನ್ನು ಇಬ್ಬರು ಪತ್ನಿ ಯರಿಗೂ ವಿಭಾಗ ಮಾಡಿದರೆ ಗೃಹಕಲಹ ಇರುವುದಿಲ್ಲ ಎನ್ನುವ ಭಾವನೆ ಯಾಜ್ಞವಲ್ಕ್ಯರದು. ಸಂಸಾರ ಸುಖವನ್ನನುಭವಿಸಿದ ನಂತರ ಸಂಸಾರವನ್ನು ತ್ಯಜಿಸಿ ಸಂನ್ಯಾಸವನ್ನು ಹೊಂದುವುದು ಆಶ್ರಮಧರ್ಮಪಾಲನೆಯೇನೋ ಸರಿ. ಆದರೆ ಇಲ್ಲಿ ಮೈತ್ರೇಯಿ ಪತಿಯನ್ನು ಸಂನ್ಯಾಸ ಸ್ವೀಕಾರಕ್ಕೆ ಅಷ್ಟು ಸುಲಭ ವಾಗಿ ಬಿಡುವಳೇ? ಐಹಿಕ ಐಶ್ವರ್ಯಗಳನ್ನು ಪಾಲು ಮಾಡಿ ಕೊಳ್ಳಬಹುದು. ಆದರೆ ಅವಳಿಗೆ ಈ ಐಹಿಕ ಭೋಗಕ್ಕಿಂತ ಹೆಚ್ಚಿನದು ಬೇಕು. ಅವಳು ಯಾಜ್ಞವಲ್ಕ್ಯರ ಅಪಾರ ಜ್ಞಾನಸಂಪತ್ತಿಗೆ ಮರುಳಾಗಿ ಬಂದವಳು. ವಯಸ್ಸು ಮೀರಿದ ಕನ್ಯೆಯನ್ನು ಗುರುಕುಲದಲ್ಲಿ ಬಹುಶಃ ಇಟ್ಟುಕೊಳ್ಳು ತ್ತಿದ್ದರೋ ಇಲ್ಲವೋ. ಆದ್ದರಿಂದ ಅವರ ಪತ್ನಿಯಾದರೆ ಪತಿಯೆಂದು ಸದಾಕಾಲವೂ ಅವರ ಸೇವೆಮಾಡುತ್ತಾ ತನಗೆ ಬೇಕಾದುದನ್ನು ಕಲಿಯಲು ಸಮಾಜದಲ್ಲಿ ಯಾವ ಆತಂಕವೂ ಇಲ್ಲದಂತೆ ಸಂಧಾನ ಮಾಡಿಕೊಂಡ ಚತುರೆ ಯಾಜ್ಞವಲ್ಕ್ಯರ ಈ ಪ್ರಿಯಪತ್ನಿ. ಅವಳು ಬುದ್ಧಿವಂತೆ.

## ವಿತ್ತದಿಂದ ಅಮೃತತತ್ತ್ವವಿಲ್ಲ.

ಸಂನ್ಯಾಸಕ್ಕೆ ಹೊರಡಲು ಸಿದ್ಧ ರಾದ ಪತಿಯನ್ನು ನೋಡಿ, ಈ ಸಮೃದ್ಧಿ ಶಾಂತಿ ಸುಖದ ಆಶ್ರಮ ವನ್ನು ಬಿಟ್ಟು ಇನ್ನೊಂದನ್ನು ಅರಸ ಬೇಕಾದರೆ ಅಲ್ಲಿ ಇದಕ್ಕಿಂತಲೂ ಹೆಚ್ಚಿನದು ಏನೋ ಇದೆ. ಏನಿರ ಬಹುದು ಎಂದು ಆಲೋಚಿಸಿದಳು. ಅವಳು ಪತಿಯನ್ನು ಪ್ರಶ್ನಿಸುತ್ತಾಳೆ: 'ಎಲೈ, ಭಗವನ್, ಇಡೀ ಭೂ ಮಂಡಲವು ತನ್ನ ಸಮಸ್ತ ಐಶ್ವರ್ಯದೊಡನೆ ನನ್ನದಾದರೆ ನಾನು ಅಮೃತತತ್ವವನ್ನು ಪಡೆಯುತ್ತೇನೆಯೇ?' ಅದಕ್ಕೆ ಯಾಜ್ಞ ವಲ್ಕ್ಯರ ಉತ್ತರ 'ಭೋಗಸಾಧನಗಳಿಂದ ಜೀವನದ ಸುಖವು ಸಿದ್ಧಿಸುತ್ತದೆ. ಆದರೆ ಈ ಐಶ್ವರ್ಯದಿಂದ ಅಮೃತತತ್ವ ಅಥವಾ ಮೋಕ್ಷವು ಸಾಧಿಸುವುದಿಲ್ಲ'ಎಂದು.

ಮೈತ್ರೇಯಿಯು 'ಹೇ ಭಗವನ್, ಯಾವುದರಿಂದ ಮೋಕ್ಷವನ್ನು ಪಡೆಯಲು ಸಾಧ್ಯವಿಲ್ಲವೋ ಅದರಿಂದ ನನಗೇನು? ನನಗೆ ನೀವು ಆ ಮೋಕ್ಷಸಾಧನವು ಏನೆಂದು ತಿಳಿದಿದ್ದೀರೋ ಅದನ್ನು ವಿವರಿಸಿ' ಎನ್ನುತ್ತಾಳೆ. ಯಾಜ್ಞ ವಲ್ಕ್ಯರಿಗೆ ಎಷ್ಟು ಸಂತೋಷವಾಗಿರಬೇಕು?

**...... ಪ್ರಿಯಾ ಬತಾರೇ ನಃ ಸತೀ ಪ್ರಿಯಂ ಭಾಷಸ ಏಹ್ಯಾಸ್ಸ್ವ ವ್ಯಾಖ್ಯಾಸ್ಯಾಮಿ ತೇ ವ್ಯಾಚಕ್ಷಾಣಸ್ಯ ತು ಮೇ ನಿದಿಧ್ಯಾಸಸ್ವೇತಿ ॥**

'ನನ್ನ ಪ್ರಿಯಪತ್ನಿಯಾದ ನೀನು ಪ್ರಿಯವನ್ನೇ ನುಡಿದೆ. ನನ್ನ ಮಾತಿನ ಅರ್ಥವನ್ನು ಅರಿತು ಅದನ್ನೇ ಧ್ಯಾನಿಸಿ ತಿಳಿದುಕೋ' ಎಂದು ಅತ್ಯಂತ ನಿರ್ಮಲ ಸ್ನೇಹದಿಂದ ಪತ್ನಿಗೆ ಉಪದೇಶಿಸುವರು. ಆ ಉಪದೇಶವಾದರೂ ಎಂತಹ ಸೊಗಸು!